**ಸಾಕ್ಷಿಯನ್ನು ದಿಃ 05.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ. ವಿಎಸ್‌ವಿ ವಕೀಲರಿಂದ**

ಅಕೇಶಿ ಮರಗಳನ್ನು ಸರ್ವೇ ನಂಬರ್ 52/2 ರಲ್ಲಿ ಬೆಳೆದಿದ್ದೇನೆ. ಸದರಿ ಜಮೀನು ಎರಡು ಗುಂಟೆ ವಿಸ್ತೀರ್ಣ ಇದೆ. ಎರಡು ಗುಂಟೆ ಜಮೀನಿನಲ್ಲಿ ಐದು ಟನ್ ಅಕೇಶಿ ಮರಗಳನ್ನು ಬೆಳೆಯಬಹುದು. ಐದು ಅಡಿ ಅಂತರಗಳಲ್ಲಿ ಅಕೇಶಿ ಮರಗಳನ್ನು ಬೆಳೆಯುತ್ತಾರೆ. ಅಕೇಶಿ ಮರಗಳನ್ನು ತೋರಿಸಲು ಛಾಯಚಿತ್ರಗಳನ್ನು ಹಾಜರು ಪಡಿಸಿಲ್ಲ. ಅಕೇಶಿ ಮರಗಳನ್ನು ಕಟಾವು ಮಾಡಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆದುಕೊಂಡಿದ್ದೇನೆ. ಅನುಮತಿಪತ್ರವನ್ನು ಹಾಜರು ಮಾಡಿಲ್ಲ. ಸದರಿ ಜಮೀನಿನಲ್ಲಿ ಅಕೇಶಿ ಮರಗಳು ಇಲ್ಲ ಮತ್ತು ಗಿಡಗಂಟೆ ಮತ್ತು ಅಶ್ವಥ ಮರ ಇದ್ದು ವಾದಿಗೆ ಸೇರುತ್ತದೆ ಎಂದರೆ ಸರಿಯಲ್ಲ. ನನ್ನ ತಮ್ಮ ಪೊಲೀಸ್ ಇಲಾಖೆಯಲ್ಲಿ ಇರುವುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಸರ್ವೇ ನಂಬರ್ 52/2 ರಲ್ಲಿ ಅಕೇಶಿ ಮರಗಳು ಇರುವುದನ್ನು ಹೇಳಿದ್ದೇನೆ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ